RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ Volume 148	ಬೆಂಗಳೂರು, ಗುರುವಾರ, ಆಗಸ್ಟ್ ೮, ೨೦೧೩ (ಶ್ರಾವಣ ೧೭, ಶಕ ವರ್ಷ ೧೯೩೫) Bangalore, Thursday, August 8, 2013 (Shravana 17, Shaka Varsha 1935)	ಸಂಚಿಕೆ ೩೨ Issue 32

ಭಾಗ ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ಜಿಲ್ಲಾಧಿಕಾರಿಯವರ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಭೂಸ್ವಾಧೀನ ಕಾಯ್ದೆಯ ಕಲಂ 17ನೇ ಪ್ರಕರಣದ ಅನ್ವಯ ಪ್ರಕರಣ 4(1)ರ ಮೇರೆಗೆ ಅಧಿಸೂಚನೆ:

ಕ್ರಮಾಂಕ: R2LAQ SR01/2012-13, ದಿನಾಂಕ: 26-06-2013

ಈ ಕೆಳಗಿನ ಅನುಸೂಚಿಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ತುಂಗಾ ಮೇಲ್ದಂಡೆ ಯೋಜನೆಯ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಲಿದೆ ಎಂದು ಸರ್ಕಾರಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ಅಧಿನಿಯಮ 1991ರ 33ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894 (ಕೇಂದ್ರ ಅಧಿನಿಯಮ ಸಂಖ್ಯೆ.1894ರ 1)ರ 4ನೇ ಪ್ರಕರಣದ ಉಪ ಬಂಧಗಳ ಮೇರೆಗೆ ಅನುಸಾರವಾಗಿ ಮೇಲೆ ನಿರ್ಧಿಷ್ಟಪಡಿಸಿದ ಉದ್ದೇಶಕ್ಕಾಗಿ ಸದರಿ ಜಮೀನುಗಳು ಅಗತ್ಯವಾಗಿದೆ ಎಂದು ಈ ಮೂಲಕ ಅಧಿಸೂಚಿಸಲಾಗಿದೆ.ಹಾಗೂ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ 4ನೇ ಪ್ರಕರಣದ (2)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರಿಗೆ ಈ ಮೂಲಕ ಅಧಿಕಾರವನ್ನು ನೀಡಿರುತ್ತದೆ.

ಸದರಿ ಅಧಿನಿಯಮದ 17ನೇ ಪ್ರಕರಣದ (1) ಮತ್ತು (4)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಪ್ರಕರಣದ ತುರ್ತಿನ ದೃಷ್ಟಿಯಿಂದ ಸದರಿ ಅಧಿನಿಯಮದ 5ಎ ಪ್ರಕರಣದ ಉಪ ಬಂಧಗಳು, ಕೆಳಗೆ ನಿರ್ಧಿಷ್ಟಪಡಿಸಲಾದ ಭೂಮಿಗಳ ಸ್ವಾಧೀನಕ್ಕೆ ಅನ್ವಯವಾಗುವುದಿಲ್ಲವೆಂದು ನಿರ್ದೇಶಿಸಿದೆ. (ಸರ್ಕಾರದ ಆದೇಶ ಸಂಖ್ಯೆ.ಕಂಇ 31 ಭೂಸ್ವಾಳ 2002 ದಿ:4-6-2002)

ಸದರಿ ಭೂಮಿಗಳ ಅರ್ಜನೆಯ ಉದ್ದೇಶಕ್ಕಾಗಿ ಸದರಿ ಭೂಮಿಗಳ ಮೇಲೆ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣಿದಾರ ಅಥವಾ ಇತರ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಅಥವಾ ಅವರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ಜಿಲ್ಲಾಧಿಕಾರಿಗಳು, ಶಿವಮೊಗ್ಗ ರವರ ಅನುಮತಿ ಇಲ್ಲದೇ ಮಾರಾಟ, ಗುತ್ತಿಗೆ, ಅಡಮಾನ, ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಸದರಿ ಭೂಮಿಗಳ ವಿಲೆಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಸದರಿ ಭೂಮಿಗಳ ಅಂತಹ ಭಾಗಗಳಿಗೆ ಪರಿಹಾರವನ್ನು ನಿರ್ಧರಣೆ ಮಾಡುವ ಅಧಿಕಾರಿಯು ಸದರಿ ಅಧಿನಿಯಮದ 24ನೇ ಪ್ರಕರಣದ 7ನೇ ಖಂಡದ (ಉಪ ಪ್ರಕರಣದ) ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ ಶಿವಮೊಗ್ಗ ಇವರ ಕಾರ್ಯಾಲಯದಲ್ಲಿ ಭೂಮಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಗ್ರಾಮ: ಲಿಂಗಾಪುರ ಹೋಬಳಿ: ಮಂಡಗದ್ದೆ ಜಿಲ್ಲೆ: ಶಿವಮೊಗ್ಗ ತಾಲ್ಲೂಕು: ತೀರ್ಥಹಳ್ಳಿ

ಕ್ರ. ಸಂ.	ಖಾತೆದಾರರ ಹೆಸರು	ಸರ್ವೆ ನಂ.	ಅನುಭವದಾರರ ಹೆಸರು	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ	
					ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ	ವಿಸ್ತೀರ್ಣ	ಆಕಾರ
					ಸ.ನಂ.	ಸ.ನಂ.	ಸ.ನಂ.	ಸ.ನಂ.	ಎ.ಗುಂ.	ರೂ.ಪೈ.
1	2	3	4	5	6	7	8	9	10	11
1	ಹಾಜಿರಾಬಾನು ಕೋಂ ಎಂ.ರಶೀದ್ ಖಾನ್	108	ಸ್ವಂತ	ತರಿ	ಗ್ರಾಮತಾಣ	108 ಉಳಿಕೆ	111	107	2–20	12.00
2	ಜಾಹೀರಾ ಖಾತೂನ್ ಕೋಂ ಅಜೀಜ್ ಖಾನ್	109/2	ಸ್ವಂತ	ತರಿ	112	109/1	114	107	0–18	2.30
3	ನಜಮುನ್ನೀಸಾ ಕೋಂ ಪ್ಯಾರೇಜಾನ್	110/1	ಸ್ವಂತ	ತರಿ	112	109	113	108	1–02	5.25
4	ಫೈಯುನ್ನೀಸಾ ಕೋಂ ಅಬ್ದುಲ್ ಮಲೇನ್	110/2	ಸ್ವಂತ	ತರಿ	112	109	113	108	1–16	7–00
5	ಅಬ್ದುಲ್ ಗನಿ ಬಿನ್ ಅಬ್ದುಲ್ ಖಾಲಿಕ್	111/1	ಸ್ವಂತ	ತರಿ	ರಸ್ತೆ	112	128	108	1–15	6–58
6	ಅಬ್ದುಲ್ ಮಜೀದ್ ಬಿನ್ ಅಬ್ದುಲ್ ಖಾಲಿಕ್	111/2	ಸ್ವಂತ	ತರಿ	ರಸ್ತೆ	112	128	108	1–15	6–58
7	1. ಸೈಯದ್ ಸಿರಾಜ್ ಬಿನ್ ಅಕ್ಬರ್ 2. ಸೈಯದ್ ಅರಬ್ ಜಾನ್ ಯಾನೆ ಅರಬ್ ಜಾನ್ ಬಿನ್ ಸೈಯದ್ ಅತಾಸ್. 3. ಗುಲ್ಜಾರ್ ಬಿನ್ ಸೈಯದ್ ಅತಾಸ್ ಮೈ.ಗಾ.ಅಣ್ಣ ಸೈಯದ್ ಅರಬ್ ಜಾನ್. 4. ಮೈಮುನ್ನೀಸಾ ಕೋಂ ಸೈಯದ್ ನಾಸೀರ್ ಯಾನೆ ಸೈಯದ್ ನಜೀರ್.	112	ಸ್ವಂತ	ತರಿ	111	113	128	108	5–19	27–13
8	ಸೈಯದ್ ಅಮೀರ್ ಬಿನ್ ಸೈಯದ್ ಗೌಸ್	126	ಸ್ವಂತ	ತರಿ	ರಸ್ತೆ	126	132	128	4–20	38–50

ಕ್ರ. ಸಂ.	ಖಾತೆದಾರರ ಹೆಸರು	ಸರ್ವೆ ನಂ.	ಅನುಭವದಾರರ ಹೆಸರು	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ	
					ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ	ವಿಸ್ತೀರ್ಣ	ಆಕಾರ
					ಸ.ನಂ.	ಸ.ನಂ.	ಸ.ನಂ.	ಸ.ನಂ.	ಎ.ಗುಂ.	ರೂ.ಪೈ.
1	2	3	4	5	6	7	8	9	10	11
9	ಫಾತೀಮಾಭಿ ಕೋಂ ಸೈಯದ್ ರಜಾಕ್	128	ಸ್ವಂತ	ತರಿ	ರಸ್ತೆ	127	128	111	3–34	19–00
10	ಪ್ಯಾರಿಜಾನ್ ಬಿನ್ ರಶೀದ್ ಖಾನ್	130	ಸ್ವಂತ	ತರಿ	ತುಂಗಾನದಿ	ರಸ್ತೆ	131	129	2–08	3–95
11	ಸೈಯದ್ ಇನ್ಸೂಪ್, ಬಾಷದ್ ಹಲಿಮಾಖಾತು, ಸೈಯದ್ ಮನ್ವರ್ ಪಾಷಾ, ಅಬ್ದುಲ್ ಆರೀಫ್, ಮಹಮ್ಮದ್ ಫಾರುಕ್	95/2	ಸ್ವಂತ ಸ್ವಂತ	ತರಿ ತರಿ	96	95/2	ತೀರ್ಥಹಳ್ಳಿ ಶಿವಮೊಗ್ಗ ರಸ್ತೆ	ತುಂಗಾ ನದಿ	1–10	6–40
12	ಅಬ್ದುಲ್ ಆರಿಫ್ ಬಿನ್ ಅಬ್ದುಲ್ ಜಬ್ಬಾರ್	95/3	ಸ್ವಂತ	ತರಿ	95/4	95/2	ರಸ್ತೆ	ತುಂಗಾ ನದಿ	0–28	3–65
13	ಮಹಮದ್ ಫಾರುಕ್ ಬಿನ್ ಅಬ್ದುಲ್ ಜಬ್ಬಾರ್.	95/4	ಸ್ವಂತ	ತರಿ	96	95/3	ರಸ್ತೆ	ತುಂಗಾ ನದಿ	0–12	1–54
14	ಅಬಜಾ ಬಾನು ,ಕೋಂ ಸೈಯದ್ ಗೌಸ್, ಸೈಯದ್ ಮುಜಬುಲ್ಲಾ ಬಿನ್ ಸೈಯದ್ ಗೌಸ್,ರೇಷ್ಮಾ ಕೋಂ ವಜೀದ್ ಸೈಯದ್ ಕರೀಂ ಬಿನ್ ಸೈಯದ್ ಗೌಸ್, ಅಬ್ದುಲ್ ಗನಿ ಬಿನ್ ಅಬ್ದುಲ್ ಖಾಲೀಕ್ ಅಬ್ದುಲ್ ಮಜೀದ್ ಬಿನ್ ಅಬ್ದುಲ್ ಖಾಲೀಕ್	96/1	ಸ್ವಂತ	ತರಿ ಖುಷ್ಕಿ	96	96/2	ತೀರ್ಥಹಳ್ಳಿ ಶಿವಮೊಗ್ಗ ರಸ್ತೆ	ತುಂಗಾ ನದಿ	1–12 0–06	6–32 0–04
15	ಮಹಮ್ಮದ್ ಅಥೀಕ್, ಬಿನ್ ಅಬ್ದುಲ್ ಜಬ್ಬಾರ್	96/2	ಸ್ವಂತ	ತರಿ ಖುಷ್ಕಿ	96/1	95/2	ರಸ್ತೆ	ತುಂಗಾ ನದಿ	0–19 0–04	2–30 0–03
16	ಮಹಮದ್ ರಫೀಕ್ ಬಿನ್ ಅಬ್ದುಲ್ ಜಬ್ಬಾರ್	96/3	ಸ್ವಂತ	ತರಿ	96/2	96/4	ರಸ್ತೆ	ತುಂಗಾ ನದಿ	0–19 0–04	2–30 0–03

ಕ್ರ. ಸಂ.	ಖಾತೆದಾರರ ಹೆಸರು	ಸರ್ವೆ ನಂ.	ಅನುಭವದಾರರ ಹೆಸರು	ತರಹೆ	ಚಕ್ಕುಬಂದಿ				ಭೂಸ್ವಾಧೀನ ಜಮೀನಿನ ವಿವರ	
					ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ	ವಿಸ್ತೀರ್ಣ	ಆಕಾರ
					ಸ.ನಂ.	ಸ.ನಂ.	ಸ.ನಂ.	ಸ.ನಂ.	ಎ.ಗುಂ.	ರೂ.ಪೈ.
1	2	3	4	5	6	7	8	9	10	11
17	ಮಹಮದ್ ಫಾರುಕ್ ಬಿನ್ ಅಬ್ದುಲ್ ಜಬ್ಬಾರ್	96/4	ಸ್ವಂತ	ತರಿ	96/3	95	ರಸ್ತೆ	ತುಂಗಾ ನದಿ	0–10 0–01	1–21 0–01
								ಜುಮ್ಲಾ	29–12	

ತುಲನಾತ್ಮಕ ತಃಖ್ತೆ

ಗ್ರಾಮ: ಲಿಂಗಾಪುರ ಹೋಬಳಿ: ಮಂಡಗದ್ದೆ ತಾಲ್ಲೂಕು:ತೀರ್ಥಹಳ್ಳಿ ಜಿಲ್ಲೆ: ಶಿವಮೊಗ್ಗ

ಕ್ರಮ ಸಂಖ್ಯೆ	ಸರ್ವೆ ನಂಬರು ಮತ್ತು ಹಿಸ್ಸೆ ನಂಬರು	ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ			ತುಂಗಾ ಮೇಲ್ದಂಡೆ ಯೋಜನೆ ಜಲಾಶಯದ ಹಿನ್ನೀರು ಮುಳುಗಡೆ	ತುಂಗಾ ಮೇಲ್ದಂಡೆ ಯೋಜನೆ ಕಿ.ಮೀ. **35,700** ರಲ್ಲಿ ಎಸ್ಕೇಪ್ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಂಡ ಹೆಚ್ಚುವರಿ ವಿಸ್ತೀರ್ಣ	ತುಂಗಾ ಮೇಲ್ದಂಡೆ ಯೋಜನೆ ಹಿನ್ನೀರು ಮುಳುಗಡೆಗೆ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ವಿಸ್ತೀರ್ಣ
		ಐಸು	ಖರಾಬು	ಬಾಕಿ	ಎಕರೆ–ಗುಂಟೆ	ಎಕರೆ–ಗುಂಟೆ	ಎಕರೆ–ಗುಂಟೆ
1	108	3–21	0–02	3–19	2–20	–	2–20
2	109/2	5–12	–	5–12	0–18	–	0–18
3	110/1	1–02	–	1–02	1–02	–	1–02

ಕ್ರಮ ಸಂಖ್ಯೆ	ಸರ್ವೆ ನಂಬರು ಮತ್ತು ಹಿಸ್ಸೆ ನಂಬರು	ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ			ತುಂಗಾ ಮೇಲ್ದಂಡೆ ಯೋಜನೆ ಜಲಾಶಯದ ಹಿನ್ನೀರು ಮುಳುಗಡೆ	ತುಂಗಾ ಮೇಲ್ದಂಡೆ ಯೋಜನೆ ಕಿ.ಮೀ. 35,700 ರಲ್ಲಿ ಎಸ್ಕೇಪ್ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಂಡ ಹೆಚ್ಚುವರಿ ವಿಸ್ತೀರ್ಣ	ತುಂಗಾ ಮೇಲ್ದಂಡೆ ಯೋಜನೆ ಹಿನ್ನೀರು ಮುಳುಗಡೆಗೆ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ವಿಸ್ತೀರ್ಣ
		ಐಸು	ಖರಾಬು	ಬಾಕಿ	ಎಕರೆ–ಗುಂಟೆ	ಎಕರೆ–ಗುಂಟೆ	ಎಕರೆ–ಗುಂಟೆ
4	110/2	1–16	–	1–16	1–16	–	1–16
5	111/1	1–15	–	1–15	1–15	–	1–15
6	111/2	1–15	–	1–15	1–15	–	1–15
7	112	5–19	0–02	5–17	5–19	–	5–19
8	126	13–24	–	13–24	4–20	–	4–20
9	128	3–34	0–02	3–32	3–34	–	3–34
10	130	2–08	0–02	2–06	2–08	–	2–08
11	95/2	3–15	–	3–15	1–10	–	1–10
12	95/3	0–28	–	0–28	0–28	–	0–28
13	95/4	0–12	–	0–12	0–12	–	0–12
14	96/1	0–18	–	0–18	1–12 0–06	–	1–12 0–06
15	96/2	0–23	–	0–23	0–19 0–04	–	0–19 0–04

ಕ್ರಮ ಸಂಖ್ಯೆ	ಸರ್ವೆ ನಂಬರು ಮತ್ತು ಹಿಸ್ಸೆ ನಂಬರು	ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ			ತುಂಗಾ ಮೇಲ್ದಂಡೆ ಯೋಜನೆ ಜಲಾಶಯದ ಹಿನ್ನೀರು ಮುಳುಗಡೆ	ತುಂಗಾ ಮೇಲ್ದಂಡೆ ಯೋಜನೆ ಕಿ.ಮೀ. 35,700 ರಲ್ಲಿ ಎಸ್ಕೇಪ್ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಂಡ ಹೆಚ್ಚುವರಿ ವಿಸ್ತೀರ್ಣ	ತುಂಗಾ ಮೇಲ್ದಂಡೆ ಯೋಜನೆ ಹಿನ್ನೀರು ಮುಳುಗಡೆಗೆ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ವಿಸ್ತೀರ್ಣ
		ಐಸು	ಖರಾಬು	ಬಾಕಿ	ಎಕರೆ–ಗುಂಟೆ	ಎಕರೆ–ಗುಂಟೆ	ಎಕರೆ–ಗುಂಟೆ
16	96/3	0–23	–	0–23	0–19 0–04	–	0–19 0–04
17	96/4	0–11	–	0–11	0–10 0–01	–	0–10 0–01
ಜುಮ್ಲಾ							**29–12**

P.R.125 ಜಿಲ್ಲಾಧಿಕಾರಿ,

SC - 50 ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ : ಕಂಇ 203 ಭೂಸ್ವಾಬೆ 2012, ಬೆಂಗಳೂರು, ದಿನಾಂಕ 27–06–2013

ಸರ್ಕಾರದ ಆದೇಶ ಸಂಖ್ಯೆ : ಕಂಇ 203 ಭೂಸ್ವಾಬೆ 2012, ದಿನಾಂಕ 28–03–2013 ರಲ್ಲಿ ಓದಲಾಗಿದೆ ಎಂಬ ಭಾಗದ ಕ್ರಮ ಸಂಖ್ಯೆ 1 ರಲ್ಲಿ ಇರುವ "ಭೂಸ್ವಾಧೀನ ಅಧಿನಿಯಮ 1894 (ತಿದ್ದುಪಡಿ ಅಧಿನಿಯಮ 1984) ಕಲಂ 4(1) ಮೇರೆಗೆ ಅಧಿಸೂಚನೆ ಸಂಖ್ಯೆ : ಎಲ್ಎಕ್ಯೂಸಿಆರ್/18/2011–12, ದಿನಾಂಕ 09–03–2012" ಎನ್ನುವುದನ್ನು ತಿದ್ದಿಕೊಂಡು "1894 ಭೂಸ್ವಾಧೀನ ಅಧಿನಿಯಮ (ತಿದ್ದುಪಡಿ ಅಧಿನಿಯಮ 1991) ಕಲಂ 4(1)ರ ಮೇರೆಗೆ ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ : ಎಲ್ಎಕ್ಯೂ/ಸಿಆರ್/10/2010–11, ದಿನಾಂಕ 21–03–2012" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಲಲಿತಾ ಹೆಚ್. ಹಂದಿಗೋಳ,

P.R. 120 ಸರ್ಕಾರದ ಅಧೀನ ಕಾರ್ಯದರ್ಶಿ,

SC - 25 ಕಂದಾಯ ಇಲಾಖೆ, (ಭೂಸ್ವಾಧೀನ–2 ಮತ್ತು ಪುನರ್ವಸತಿ)

ಕಂದಾಯ ಸಚಿವಾಲಯ

ಭೂಸ್ವಾಧೀನ ಅಧಿನಿಯಮದ 6(1)ನೇ ಪ್ರಕರಣದ ಮೇರೆಗೆ ಘೋಷಣೆ

ಕ್ರಮಾಂಕ : RD 21 AQT 2013 ದಿನಾಂಕ: 10/07/2013

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆDoubling of track between yeshwantpur-Tumkur proposed goods yard at Kyatsandra ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂದು Tumkur ಜಿಲ್ಲೆಯ ಜಿಲ್ಲಾಧಿಕಾರಿಯವರು ಭೂಸ್ವಾಧೀನ ಕಾಯ್ದೆ 1894 ರ ಕಲಂ 4(1) ರ ಮೇರೆಗೆ ಅಧಿಸೂಚನೆ ಕ್ರಮಾಂಕ:LAQ/SR/6/2012-13 ,ದಿನಾಂಕ :13/08/2012 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿದ್ದುದರಿಂದ,

ಮತ್ತು ಕರ್ನಾಟಕ ಕಾಯ್ದೆ 33/1991 ರನ್ವಯ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894ರ (ಕೇಂದ್ರ ಅಧಿನಿಯಮ 1894)(1)5ಎ ಪ್ರಕರಣದ (2)ನೇ ಉಪಪ್ರಕರಣದ ಮತ್ತು 6(1ಎ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರು ನೀಡಿರುವ ವರದಿಯನ್ನು ಪರಿಶೀಲಿಸಿದ ನಂತರ ಮೇಲೆ ನಿರ್ದಿಷ್ಟ ಪಡಿಸಿದ ಉದ್ದೇಶಕ್ಕಾಗಿ ಸದರಿ ಭೂಮಿಗಳನ್ನು ಅರ್ಜನೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ,ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಭೂಮಿಗಳು ಅಗತ್ಯವಾಗಿವೆ ಎಂದು ಸದರಿ ಅಧಿನಿಯಮ 6(1) ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಸಹಾಯಕ ಆಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ, Tumkur ಇವರನ್ನು ಸದರಿ ಭೂಮಿಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಕೈಗೊಳ್ಳುವ ಎಲ್ಲಾ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಸದರಿ ಭೂಅರ್ಜನೆ ಅಧಿನಿಯಮದ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ ಹಾಗೂ ಸದರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಸದರಿ ಭೂಮಿಗಳ ನಕಾಶೆಯನ್ನು ಪರಿವೀಕ್ಷಣೆಗಾಗಿ ಸಹಾಯಕ ಆಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ, Tumkur ಇವರ ಕಛೇರಿಯಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : Tumkur **ತಾಲ್ಲೂಕು : Tumkur** **ಹೋಬಳಿ : ಊರ್ಡಿಗೆರೆ** **ಗ್ರಾಮ : ತಿಮ್ಮಾಪುರ**

Agricultural

ಕ್ರ. ಸ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂಸ್ವಾಧೀನದ ಜಮೀನಿನ ವಿವರ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಆಕಾರ
1	B.ಗಂಗಾಧರಯ್ಯ/ಲೇ., B. ಬೋರೆಗೌಡ		4/*/2	ಖುಷ್ಕಿ	ರೈಲ್ವೇ ರಸ್ತೆ	ಸ.ನಂ.4/2 ರ ಬ್ಲಾಕ್ 2	ಸ.ನಂ.4/2 ರ ಉಳಿಕೆ	ಕ್ಯಾತಸಂದ್ರ ಗ್ರಾಮದ ಗಡಿ	0.13.04	0-40

ಕ್ರ. ಸ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂಸ್ವಾಧೀನದ ಜಮೀನಿನ ವಿವರ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಆಕಾರ
2	ಶಂಭಣ್ಣ/ಲೇ,,ಈಶ್ವರಪ್ಪ		4/*/2	ಖುಷ್ಕಿ	ರೈಲ್ವೇ ರಸ್ತೆ	ಸ.ನಂ.4/3	ಸ.ನಂ.4/2 ರ ಉಳಿಕೆ	ಸ.ನಂ.4/2 ಬ್ಲಾಕ್ 2	0.9.08	0-28
3	S.ಸುರೇಶ್/ಲೇ.K.N.ಸಿದ್ದಲಿಂಗಯ್ಯ		4/*/2	ಖುಷ್ಕಿ	ರೈಲ್ವೇ ರಸ್ತೆ	ಸ.ನಂ.4/3 ಬ್ಲಾಕ್ 3	ಸ.ನಂ.4/2 ರ ಉಳಿಕೆ	ಸ.ನಂ.4/2 ಬ್ಲಾಕ್ 1	0.9.08	0-0.28
					ರೈಲ್ವೇ ರಸ್ತೆ	ಸ.ನಂ.4/2 ರ ಬ್ಲಾಕ್ 2	ಸ.ನಂ.4/2 ರ ಉಳಿಕೆ	ಕ್ಯಾತಸಂದ್ರ ಗ್ರಾಮದ ಗಡಿ	0.32.04	
4	T. ಉಮಾದೇವಿ/ಬಿನ್ ಗಂಗಮ್ಮ- ಭೂ.ಪ		4/*/3	ಖುಷ್ಕಿ	ರೈಲ್ವೇ ರಸ್ತೆ	ಸ.ನಂ. 4/3 ರ ಉಳಿಕೆ	ಸ.ನಂ. 4/3 ರ ಉಳಿಕೆ	ಸ.ನಂ. 4/2	0.17.04	0-52
					ರೈಲ್ವೇ ರಸ್ತೆ	ಸ.ನಂ. 4/3 ರ ಉಳಿಕೆ	ಸ.ನಂ. 4/3 ರ ಉಳಿಕೆ	ಸ.ನಂ. 4/2	0.17.04	

Village Extents: 1.9.08

DESIGNATION : ಸಹಾಯಕ ಆಯುಕ್ತರು

LAOCIRCLE : ಸಹಾಯಕ ಆಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ

LAOLOCATION : ತುಮಕೂರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂಸ್ವಾಧೀನ-2)

P.R. 124
SC - 25